**<u>ಸಾಕ್ಷಿಯನ್ನು ದಿನಾಂಕಃ 19.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ</u>**

ವಾದಿ ಏನು ಪರಿಹಾರ ಕೇಳಿ ಈ ದಾವೆ ಹೂಡಿರುತ್ತಾರೆಂಬುದು ನನಗೆ ಗೊತ್ತಿರುತ್ತದೆ. ವಾದಿಯು ಮುದ್ದಪ್ಪ ಎನ್ನುವವರ ಮಗನಾಗಿದ್ದು ಕಾಳೇಗೌಡ ಎನ್ನುವವರು ವಾದಿಯ ತಾತ ಆಗಬೇಕೆಂದರೆ ಸರಿ. ಸ.ನಂ. 29 ರಲ್ಲಿ ಒಟ್ಟು 03 ಎಕರೆ 18 ಗುಂಟೆ ವಿಸ್ತೀರ್ಣ ಇರುತ್ತದೆಂದರೆ ಸರಿ. ಕಾಳೇಗೌಡರಿಗೆ 03 ಜನ ಮಕ್ಕಳು ಎಂದರೆ ಸಾಕ್ಷಿ ಇಬ್ಬರು ಹೆಂಡತಿಯರಿಂದ ಒಟ್ಟು 03 ಜನ ಮಕ್ಕಳು ಎಂದು ನುಡಿಯುತ್ತಾರೆ. ಬಲ್ಲೆಗೌಡ, ಮುದ್ದಪ್ಪ ಮತ್ತು ಅಪ್ಪಾಜಪ್ಪ ಎನ್ನುವ ಸದರಿ 03 ಜನ ಮಕ್ಕಳು ಎಂದರೆ ಸರಿ. ಅವರ ನಡುವೆ ಬಹಳ ಹಿಂದೆಯೇ ವಿಭಾಗ ಆಗಿರುತ್ತದೆಂದರೆ ಸರಿಯಲ್ಲ. ದಿನಾಂಕಃ 12.03.1964 ರಂದು ಅವರುಗಳು ತಮ್ಮ ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡು ಸದರಿ ವಿಭಾಗದಲ್ಲಿ ಅವರವರ ಭಾಗಕ್ಕೆ ಬಂದ ಆಸ್ತಿಯ ಸ್ವಾಧೀನಾನುಭವ ಹೊಂದಿರುತ್ತಾರೆಂದರೆ ಸರಿಯಲ್ಲ. ಹಿರೇಹಳ್ಳಿ ಗ್ರಾಮದ ಸ.ನಂ. 18 ರ ಒಳಹೊಲ ಒಟ್ಟು 08 ಎಕರೆ 02 ಗುಂಟೆ ಜಮೀನು ಇರುತ್ತದೆಂದರೆ ಸರಿ. ಅದೇ ರೀತಿ ಸ.ನಂ. 4 ರಲ್ಲಿ 03 ಎಕರೆ 15 ಗುಂಟೆ ಜಮೀನು ಇರುತ್ತದೆಂದರೆ ಸರಿ. ಸ.ನಂ. 29 ರ 03 ಎಕರೆ 18 ಗುಂಟೆ ಜಮೀನನನ್ನು ಹೊಸ ಹೊಲ ಎಂದು ಕರೆಯುತ್ತಾರೆಂದರೆ ಸರಿ. ಸದರಿ ಮೇಲೆ ಹೇಳಿದ ಜಮೀನುಗಳನ್ನು ನಾನು ಹುಟ್ಟುವ ಪೂರ್ವದಲ್ಲಿಯೇ ಬಲ್ಲೆಗೌಡ, ಮುದ್ದಪ್ಪ ಮತ್ತು ಅಪ್ಪಾಜಪ್ಪ ಎನ್ನುವವರು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಬಲ್ಲೇಗೌಡರ ಮಗನನ್ನು ಲಿಂಗಪ್ಪ @ ಲಿಂಗೇಗೌಡ @ ನಿಂಗಣ್ಣ ಎಂದೂ ಸಹ ಕರೆಯುತ್ತಾರೆಂದರೆ ಸರಿ. ಸದರಿ ವಿಭಾಗದಲ್ಲಿ

ಬಲ್ಲೇಗೌಡರ ಮಗನಾದ ಲಿಂಗಪ್ಪ @ ಲಿಂಗೇಗೌಡ @ ನಿಂಗಣ್ಣ ರವರಿಗೆ ಸ.ನಂ. 18 ರಲ್ಲಿ 03 ಎಕರೆ 31 ಗುಂಟೆ ಹಾಗು ಸ.ನಂ. 29/4 ರಲ್ಲಿ 01 ಎಕರೆ 03 ಗುಂಟೆ ಜಮೀನು ಹೋಗಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹೊಸ ಹೊಲದಲ್ಲಿ ಯಾರಿಗೂ ಆಸ್ತಿ ಹೋಗಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ಸ.ನಂ. 4 ರಲ್ಲಿ 03 ಎಕರೆ 15 ಗುಂಟೆ, ಸ.ನಂ. 18 ರಲ್ಲಿ 05 ಗುಂಟೆ ಹಾಗು ಸ.ನಂ. 29/4 ರಲ್ಲಿ 01 ಎಕರೆ 22 ಗುಂಟೆ ಜಮೀನು ವಾದಿಯ ತಂದೆಯಾದ ಮುದ್ದಪ್ಪರವರ ಭಾಗಕ್ಕೆ ಹೋಗಿರುತ್ತದೆಂದರೆ ಸಾಕ್ಷಿಯು ಹೊಸ ಹೊಲ ಯಾರ ಭಾಗಕ್ಕೂ ಹೋಗಿರುವುದಿಲ್ಲ ಬೇರೆ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಅದೇ ರೀತಿ ಸದರಿ ವಿಭಾಗದಲ್ಲಿ ಸ.ನಂ. 18 ರಲ್ಲಿ 04 ಎಕರೆ 01 ಗುಂಟೆ ಮತ್ತು 05 ಗುಂಟೆ ಹಾಗು ಸ.ನಂ. 29/4 ರಲ್ಲಿ 33 ಗುಂಟೆ ಜಮೀನು ಅಪ್ಪಾಜಪ್ಪರವರ ಭಾಗಕ್ಕೆ ಹೋಗಿರುತ್ತದೆಂದರೆ ಸಾಕ್ಷಿಯು ಹೊಸ ಹೊಲ ಯಾರ ಭಾಗಕ್ಕೂ ಹೋಗಿರುವುದಿಲ್ಲ ಬೇರೆ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸ.ನಂ. 29/4 ರ ಪೂರ್ಣ 03 ಎಕರೆ 18 ಗುಂಟೆ ಜಮೀನು ಬಗರ್ ಹುಕುಂನಲ್ಲಿ ಕಾಳೇಗೌಡರಿಗೆ ಬಂದಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯಾದ ಲಿಂಗಪ್ಪ @ ಲಿಂಗೇಗೌಡರವರಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ನನ್ನ ಮುತ್ತಾತ ಕಾಳೇಗೌಡರು ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಬಲ್ಲೇಗೌಡರ ಮಗ ಲಿಂಗೇಗೌಡ ಎಂದರೆ ನನ್ನ ತಂದೆ. ಅವರು ಓದು-ಬರಹ ಬಲ್ಲವರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗದಲ್ಲಿ ಹೊಸ ಹೊಲ ಅಂದರೆ ಸ.ನಂ. 29/4 ರ ಸಂಪೂರ್ಣ 03 ಎಕರೆ 18

ಗುಂಟೆ ಜಮೀನು ಸಹ ವಿಭಾಗವಾಗಿದ್ದು ಆದರೆ ಅದನ್ನು ಕಬಳಿಸುವ ಉದ್ದೇಶದಿಂದ ಸದರಿ ಆಸ್ತಿ ವಿಭಾಗವಾಗಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ನನ್ನ ತಂದೆಯು ಕುಟುಂಬದ ಹಿರಿಯರಾಗಿದ್ದು ದಾವಾ ಆಸ್ತಿಯು ಅವರ ಹೆಸರಿನಲ್ಲಿದ್ದು ಅದನ್ನು ಕಬಳಿಸುವ ಉದ್ದೇಶದಿದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**